ಜಯತೀರ್ಥ ಶ್ರೀಪತಿ, ಹುಬ್ಬಳ್ಳಿ

ಬೀದಿಯಲ್ಲಿ ಒಬ್ಬನೇ ನಗುತ್ತಾ ಹೋಗುವವನು ಆರೋಗ್ಯವಂತನೋ, ಮಾನಸಿಕ ರೋಗಿಯೋ ಎಂದು ಗುರುತಿಸುವುದು ಹೇಗೆ?



ಕಿವಿಯನ್ನು ಗಮನಿಸಿ; ಇಯರ್ ಫೋನಿದ್ದು ನಗುತ್ತಿದ್ದರೆ ಸ್ವಸ್ಥ; ಇಲ್ಲದೆ ನಗುತ್ತಿದ್ದರೆ ರೋಗಿ.

ರಾಜೀವ್ ಎನ್. ಮಾಗಲ್, ಸಕಲೇಶಪುರ

ಪ್ರಾಣಿಗಳು ನಾಡಿಗೆ ಬಂದರೆ ಅದು ಸಂಘರ್ಷ. ಮಾನವ ಕಾಡಿಗೆ ಹೋದರೆ?

ಶೀಘ್ರದಲ್ಲೇ ಒಣಮಹೋತ್ಸವ.

ಹರಿತಸ, ಬೆಂಗಳೂರು

ಡ್ರೈವರ್ ಕಟ್ಟಿದ ಸೀಟ್ ಬೆಲ್ಟಿಗೂ, ಸತಿಗೆ ಕಟ್ಟಿದ ಮಂಗಳಸೂತ್ರಕ್ಕೂ ವ್ಯತ್ಯಾಸ?

ಬೆಲ್ಟ್ ಆಕ್ಸಿಡೆಂಟಲ್ ಇನ್ಶೂರೆನ್ಸ್; ಮಂಗಳಸೂತ್ರ ಲೈಫ್ ಇನ್ಶೂರೆನ್ಸ್.

ಮಂಡಿ ಕುಮಾರ್, ಬೆಂಗಳೂರು

ನಮ್ಮ ಅಂಗಾಂಗಗಳಲ್ಲಿ ಅತಿ ಹೆಚ್ಚು ಚಟುವಟಿಕೆಯಿಂದ ಕೆಲಸ ಮಾಡುವ ಅಂಗ ಯಾವುದು?



ಒಂದು ನಿಮಿಷವೂ ಬಿಡುವಿಲ್ಲದೆ ಉಸಿರಾಡುವ ಮೂಗು.

ಪಿ. ಜಯವಂತ ಪೈ, ಕುಂದಾಪುರ

ಶ್ರದ್ಧೆಗೂ, ಶ್ರಾದ್ಧಕ್ಕೂ ವ್ಯತ್ಯಾಸವೇನು?

ಬಾಳುವವರು ಮೇಲೇರಲು ಶ್ರದ್ಧೆ. ಅಳಿದವರು ಮೇಲೇರಲು ಶ್ರಾದ್ಧ.

ಅಭಿಲಾಷ ಎಸ್.ಎಲ್., ಬೆಂಗಳೂರು

ಎಷ್ಟೇ ಅನುಕೂಲ ಇದ್ದರೂ ರೈತ ವರಗಳಿಗೆ ವಧುಗಳು ಸಿಗುತ್ತಿಲ್ಲ. ಏಕೆ?

ಸೈಕಲಾಜಿಕಲ್ ಸಾಯಿಲ್ ಅಲರ್ಜಿ!

ಜೀವಿ, ಗೊಂಡೇದಹಳ್ಳಿ

ಬೇಹುಗಾರಿಕೆ, ಗುಪ್ತಚರ ಇಲಾಖೆಗೆ ಸ್ತ್ರೀಯರನ್ನು ಹೆಚ್ಚು ನೇಮಿಸಿದರೆ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಸುಲಭವಲ್ಲವೆ?

ಊಹೂಂ. ಆಗ ಮಹಿಳೆಯರ ಮೇಲೆ ಕಣ್ಣಿಡುವವರ ಮೇಲೆ ಕಣ್ಣಿಡುವುದರಲ್ಲೇ ವ್ಯವಸ್ಥೆ ಕುಲಗೆಡುತ್ತದೆ.

ಬೂಕನಕೆರೆ ವಿಜೇಂದ್ರ, ಮೈಸೂರು

ಮಹಿಳಾ ಉದ್ಯೋಗಿಗಳು ಸರ್ಕಾರಿ ನೌಕರಿಯಿಂದ ನಿವೃತ್ತಿಯಾಗುವ ದಿನ ಕಣ್ಣೀರು ಹಾಕುವುದೇಕೆ?

ಮರುದಿನದಿಂದ ಇರುವ ಗೃಹೋದ್ಯೋಗಕ್ಕೆ ಟಿಎ, ಡಿಎ, ಪ್ರೊಮೋಷನ್, ಇನ್‌ಕ್ರಿಮೆಂಟ್‌ಗಳು ಇರುವುದಿಲ್ಲವಲ್ಲ.

ರಾಮಸ್ವಾಮಿ, ಭೀಮನಕಟ್ಟೆ

ಇಲ್ಲೊಬ್ಬ ಹುಡುಗ ಕಂಡಾಗಲೆಲ್ಲ 'ದೊಡ್ಡವರೆಲ್ಲ ಜಾಣರಲ್ಲ' ಎಂದು ಹಾಡುತ್ತಾ ಹೋಗುವನಲ್ಲ?

ಓಹ್! ನಿಮಗೆ ತಿಳಿಯದಂತೆ ಪ್ರೇಮ ಪ್ರಕರಣ ನಡೆದಿದೆಯೇನೋ; ಕೂಡಲೆ ಮಗಳನ್ನು ವಿಚಾರಿಸಿ.

ಜಯಶ್ರೀ, ಬೆಂಗಳೂರು

'ಕಿವಿಯ ಮೇಲೆ ಹೂವು ಇಡೋದು' ಅಂದರೆ ಏನು ರಾಮ್‌ಜೀ?

'ನೀ ನಲ್ಲೆ' ಎನ್ನುತ್ತಲೇ ನೀನಲ್ಲೇ ಇರುವಂತೆ ಏಮಾರಿಸುವುದು.

ಭಾರತೀ ಗಂಗಾಧರ, ಬೆಂಗಳೂರು

ಮಂಗನಿಂದ ಮಾನವ. ಮಂಗನನ್ನು ಹನುಮಂತ ಎನ್ನುತ್ತಾರೆ. ಮಾನವ?

ಹಣೆ ಚಚ್ಚಿಕೊಳ್ಳುವ ಕೆಲಸ ಮಾಡಿದಾಗ 'ರಾಮ ರಾಮಾ' ಎನ್ನುವರಲ್ಲ!

ಮಲ್ಲಿಕಾರ್ಜುನ ಸುರಧೇನುಪುರ

ಕಡ್ಡಾಯ ಶಿಕ್ಷಣ ಕೇವಲ ಮಕ್ಕಳಿಗೇ ಯಾಕೆ?

ಗೋಡೆ ಹಸಿಯಾಗಿರುವಾಗಲೇ ಕುಸುರಿ ಕೆಲಸ ಮಾಡಲು ಸಾಧ್ಯ.

ಐಶ್ವರ್ಯ ಬಿದರಹಳ್ಳಿ, ಹಿರೇಹಡಗಲಿ

ಪ್ರಾಣಿಗಳು ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ. ಏಕೆ?

ಸಾಲಿಗರ ಭಯ, ಪ್ರೇಮ ವೈಫಲ್ಯ ಇರುವುದಿಲ್ಲವಲ್ಲ.

## ಬಹುಮಾನಿತ ಪ್ರಶ್ನೆ

ಅನಸೂಯಾ ಟಿ., ಕೇದಿಗೆಮನೆ

ಸೂರ್ಯನು ದಿನಕ್ಕೊಂದು ದಿಕ್ಕಿನಲ್ಲಿ ಹುಟ್ಟಿದರೆ ಏನಾಗುತ್ತೆ?

ಮಿಕ್ಕ ಗ್ರಹಗಳು ದಿಕ್ಕುಗೆಟ್ಟು ಆಟೋದಂತೆ ಅಡ್ಡಾದಿಡ್ಡಿ ಓಡತೊಡಗುತ್ತವೆ.

ಕೆ.ಸಿ. ಸತ್ಯನಾರಾಯಣ, ದೊಡ್ಡಬಳ್ಳಾಪುರ

ರಾಜಕಾರಣಿಗಳು ತಮ್ಮ ಪೆನ್ ಡ್ರೈವಲ್ಲಿರುವುದನ್ನು ತೋರಿಸುವವರೆಗೆ ತಾವು ಸಾಯುವುದಿಲ್ಲವೆಂದು ಇಲ್ಲೊಬ್ಬ ವೃದ್ಧರು ಹೇಳುತ್ತಿರುವರಲ್ಲ?

ಅಲ್ಲಿಗೆ ಚಿರಂಜೀವಿಗಳ ಪಟ್ಟಿಗೆ ಮತ್ತೊಂದು ಹೆಸರು ಸೇರಿದಂತಾಯಿತು.

ಟಿ.ಎಸ್. ಪ್ರತಿಭಾ, ಚಿತ್ರದುರ್ಗ

ಟಿಕೆಟ್ ಕೈ ತಪ್ಪಿದಾಗ ಕಣ್ಣೀರಿಡುವ ರಾಜಕಾರಣಿಗಳಿಗೆ ಏನನ್ನ ಬೇಕು?

ಏನು ಬೇಕಾದರೂ ಅನ್ನಿ. ಟಿಕೆಟ್ ಸಿಗುವವರೆಗೆ ನೀವೇನೆಂದರೂ ಅವರು ಗಮನಿಸರು.

ಮಂಜು ಉಡೇವ, ಕಡೂರು

ಖಡ್ಗ, ಲೇಖನಿ, ಹೆಣ್ಣಿನ ನಾಲಿಗೆ; ಈ ಮೂರರಲ್ಲಿ ಯಾವುದು ಹೆಚ್ಚು ಹರಿತ?



ಜಡ ಗಂಡು ಹರಿದಾಡುವಂತಾಗಿಸುವ ಹೆಣ್ಣಿನ ನಾಲಿಗೆಯೇ.

ಪಿ.ಜೆ. ರಾಘವೇಂದ್ರ, ಮೈಸೂರು

ಮತದಾರರಲ್ಲಿ ಜಾಗೃತಿ ಮೂಡಿಸುವಂತೆ ಜನಪ್ರತಿನಿಧಿಗಳಲ್ಲಿ ಜಾಗೃತಿ ಏಕಿಲ್ಲ?

'ಅಪಾಯ ಇದೆ ಎಚ್ಚರ' ಎಂದು ಅಪಾಯಕ್ಕೆ ಜಾಗೃತಿ ಮೂಡಿಸುವುದು ಹುಚ್ಚುತನವಲ್ಲವೆ!

ಹೆಚ್.ವಿ. ಶ್ರೀಧರ್, ಬೆಂಗಳೂರು

ಭವಸಾಗರದಲ್ಲಿ ಈಜುವ ಅನುಭವವಿದ್ದರೆ ವಿಜಯೀಭವ. ಇಲ್ಲದಿದ್ದರೆ ಪರಿಭವವೇ ಪರಾಭವವಲ್ಲವೆ?

ಹಾಗೇನಿಲ್ಲ. ಮಾವನೆಂಬ ಸೋರೆಬುರುಡೆ ಕಟ್ಟಿಕೊಂಡೇ ಜೀವನ ಸಾಗಿಸಿದವರಿದ್ದಾರೆ.

■ ರಾಮ್